# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056
ದೂ.ವಾ: 22961039, ಫ್ಯಾಕ್ಸ್: 080 – 23211020 ವೆಬ್ಸೈಟ್: www.bangaloreuniversity.ac.in.

**ಸಂಖ್ಯೆ:ಎಸಿಎ-3:ಸಂಸ:2022-23** **23 ಮೇ, 2022**

## ಅಧಿಸೂಚನೆ

**ವಿಷಯ: 2022-23ನೇ ಸಾಲಿಗೆ ಸಂಯೋಜನೆಗಾಗಿ ಅರ್ಜಿ ಆಹ್ವಾನಿಸುವ ಬಗ್ಗೆ.**

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020(ಭಾಗ-2) ದಿನಾಂಕ:26-04-2022
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020 ದಿನಾಂಕ: 18-02-2022
3. ಕುಲಪತಿಯವರ ಅನುಮೋದನೆ ದಿನಾಂಕ:23-05-2022.

ಬೆಂಗಳೂರು ವಿಶ್ವವಿದ್ಯಾಲಯವು, **2022-23ನೇ** ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗದಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ, ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮೀ ಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ ವಿವಿಧ ರೀತಿಯ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

**ಕಾಲೇಜುಗಳು ಮತ್ತು ಆಡಳಿತ ಮಂಡಳಿಗಳು ಸಂಯೋಜನಾ ಅರ್ಜಿಗಳನ್ನು ಸರ್ಕಾರದ ಆನ್-ಲೈನ್ ವೆಬ್ ಸೈಟ್ https://www.onlineaffiliation.karnataka.gov.in/Affiliation22_23/Login.aspx' ಮಾತ್ರವೇ ಸಲ್ಲಿಸತಕ್ಕದ್ದು. ಈ ಅರ್ಜಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 34 ಇಜಿಒವಿ 2020(ಭಾಗ-2) ದಿನಾಂಕ:26-04-2022 ರಂತೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020 ದಿನಾಂಕ: 18-02-2022 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021 ದಿನಾಂಕ: 12-02-2021/16-02-2021ರಲ್ಲಿನ ಗುಣಮಟ್ಟ/ಮಾನದಂಡಗಳನುಸಾರ ಮತ್ತು ಯುಜಿಸಿ (ವಿಶ್ವವಿದ್ಯಾಲಯದಿಂದ ಕಾಲೇಜುಗಳ ಸಂಯೋಜನೆ) ನಿಯಮ 2009ರಂತೆ ಅನ್ವಯ ಪರಿಗಣಿಸಲಾಗುವುದು.**

**ಕಾಲೇಜುಗಳು / ಆಡಳಿತ ಮಂಡಳಿಗಳು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನುಸಾರ/ಮಾರ್ಗಸೂಚಿಯನುಸಾರ ಮೂಲಭೂತ ಹಾಗು ಇತರ ಸೌಕರ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.**

**1. ಕಡ್ಡಾಯ ಮಾನದಂಡ:**

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 384 ಯುಎನ್ಇ 2020 ದಿನಾಂಕ: 18-02-2022ರಲ್ಲಿ ಹೊಸ ಕಾಲೇಜುಗಳ / ಹೊಸ ಕೋರ್ಸುಗಳ/ ಪ್ರವೇಶ ಸಂಖ್ಯೆಯ ಹೆಚ್ಚಳ/ ಸಂಯೋಜನೆ ಮುಂದುವರಿಕೆ / ನವೀಕರಣ/ ಸ್ಥಳ ಬದಲಾವಣೆ ಇತ್ಯಾದಿಗಳ ಬಗ್ಗೆ ಸಂಸ್ಥೆ/ಕಾಲೇಜುಗಳು ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನಿನ ಮಿತಿಯನ್ನು ಕೆಳಗಿನಂತೆ ಪರಿಷ್ಕರಿಸಿರುತ್ತಾರೆ:

ಮಾನದಂಡಗಳು:

1. ಕಾಲೇಜು/ಸಂಸ್ಥೆಗಳು ಯಾವುದೇ ತಗಾದೆ ಇಲ್ಲದ ಯಾವುದೇ ಅಡೆತಡೆ ಇಲ್ಲದಂತೆ ಹೊಂದಿರತಕ್ಕಂತ ಜಮೀನಿನ ವಿಸ್ತೀರ್ಣ:
    - ಅ. ಕಾಲೇಜುಗಳು ಮಹಾನಗರಗಳಲ್ಲಿ ಇದ್ದಲ್ಲಿ 0.5 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.
    - ಆ. ಕಾಲೇಜುಗಳು ಬಿಎಂಆರ್‌ಡಿಎ, ನಗರ ಕಾರ್ಪೊರೇಷನ್ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಇದ್ದಲ್ಲಿ 1 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ.
    - ಇ. ಕಾಲೇಜುಗಳು ಪುರಸಭೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಇದ್ದಲ್ಲಿ 1.5 ಎಕರೆಯ ಮಿತಿಗಿಂತ ಕಡಿಮೆ ಇರತಕ್ಕದ್ದಲ್ಲ
    - ಈ. ಕಾಲೇಜುಗಳು ಯಾವುದೇ ಇತರ ಗ್ರಾಮೀಣ ಪ್ರದೇಶದಲ್ಲಿ ಇದ್ದಲ್ಲಿ 3 ಎಕರೆಯ ಮಿತಿಗಿಂದ ಕಡಿಮೆ ಇರತಕ್ಕದ್ದಲ್ಲ.

ಪರಂತು, ಈ ಮಾನದಂಡವು ಯು.ಜಿ.ಸಿ. ಅಧಿಸೂಚನೆ (ವಿಶ್ವವಿದ್ಯಾಲಯದಿಂದ ಕಾಲೇಜುಗಳ ಸಂಯೋಜನೆ) ನಿಯಮ 2009ರಂತೆ ಮತ್ತು ತಿದ್ದುಪಡಿ 2012ಕ್ಕಿಂತ ಹಿಂದೆ ಅಸ್ತಿತ್ವದಲ್ಲಿದ್ದ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ. ಆದರೆ, ಅಂತಹ

ಕಾಲೇಜುಗಳಲ್ಲಿ ಯಾವುದೇ ಅಸ್ತಿತ್ವದಲ್ಲಿರುವ ಕೋರ್ಸುಗಳು ಹಾಗೂ ವಿದ್ಯಾರ್ಥಿ ಪ್ರಮಾಣಗಳು ವ್ಯತ್ಯಾಸವಿರದಿದ್ದಪಕ್ಷದಲ್ಲಿ ಮಾತ್ರ ಈ ವಿನಾಯಿತಿಯು ಅನ್ವಯವಾಗುತ್ತದೆ.

2. ನ್ಯಾಯಸಮ್ಮತವಾದ ಅಸಾಧಾರಣ ಪ್ರಕರಣಗಳಲ್ಲಿ ನೋಂದಾಯಿತ ಸೊಸೈಟಿ/ಟ್ರಸ್ಟ್‌ಗಳು ಪ್ರಥಮ ವರ್ಷದ ಕಾರ್ಯಕ್ರಮ/ಕೋರ್ಸನ್ನು ಲಭ್ಯವಿರುವ ಕಟ್ಟದಲ್ಲಿ ಪ್ರಾರಂಭಿಸಲು ಅನುಮತಿಸಬಹುದು, ಆದರೆ, ಕಂಡಿಕೆ 1ರಲ್ಲಿ ತಿಳಿಸಿರುವ ಪ್ರಕಾರ ಸಂಸ್ಥೆಯು ಶಾಶ್ವತ ಆಧಾರದ ಮೇಲೆ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಅಗತ್ಯವಾದ ಭೂಮಿಯನ್ನು ಹೊಂದಿರಬೇಕು.

3. ನೋಂದಾಯಿತ ಸಮಾಜ/ಟ್ರಸ್ಟ್‌ನಿಂದ ಕಾರ್ಯಗತಗೊಳಿಸಬೇಕಾದ ಬಾಂಡ್‌ನಲ್ಲಿ ಕಾಲೇಜು ಸಂಯೋಜಿತವಾದ ನಂತರ, ಅದನ್ನು ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಬೇರೆ ಸ್ಥಳಕ್ಕೆ ಸ್ಥಳಾಂತರವಾಗುವುದಿಲ್ಲ ಅಥವಾ ಬೇರೆ ಸಮಾಜ, ಟ್ರಸ್ಟ್, ವ್ಯಕ್ತಿ ಅಥವಾ ಗುಂಪಿಗೆ ವರ್ಗಾಯಿಸಲಾಗುವುದಿಲ್ಲ ಎಂದು ನಮೂದಿಸಬೇಕು. ಹಾಗೇ ಕಾಲೇಜನ್ನು ಸ್ಥಳಾಂತರಕ್ಕೆ ಪ್ರಸ್ತಾಪಿಸಿದ ಹೊಸ ಸ್ಥಳದಲ್ಲಿ , ಕಂಡಿಕೆ 1ರಲ್ಲಿ ನಮೂದಿಸುವಂತೆ ಕನಿಷ್ಠ ವಿಸ್ತೀರ್ಣದ ಜಮೀನನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಸದರಿ ಜಮೀನು ಆಯಾ ಸಂಸ್ಥೆ ಅಥವಾ ಕಾಲೇಜಿನ ಹೆಸರಿನಲ್ಲಿದೆಯೇ ಎಂಬುದಕ್ಕೆ ಕೆಳಕಂಡ ದಾಖಲಾತಿಗಳನ್ನು ಒದಗಿಸತಕ್ಕದ್ದು.:-

1. ಸದರಿ ಜಮೀನಿನ ಪಹಣಿ ಅಥವಾ ಮುನಿಸಿಪಾಲಿಟಿ/ಕಾರ್ಪೊರೇಷನ್‌ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು.

**ಅಥವಾ**

ಸದರಿ ಜಮೀನನ್ನು ಸಂಸ್ಥೆಯು/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಯಿತವಾಗಿರುವ (ಅ) ಕ್ರಯಪತ್ರ ಅಥವಾ (ಬಿ) 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ದಾನಪತ್ರ.

ಮುಂದುವರೆದು, ಕಾಯ್ದೆ/ಪರಿನಿಯಮಾವಳಿಯಲ್ಲಿ ಅಗತ್ಯಪಡಿಸುವ ಇತರ ದಾಖಲೆಗಳನ್ನು ಸಲ್ಲಿಸತಕ್ಕದ್ದು.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ; 24-08-2020ರ ಅನ್ವಯ, NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿ ಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance certificate ಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಕಾಲೇಜುಗಳು ಸರ್ಕಾರವು ಆನ್-ಲೈನ್ ತಂತ್ರಾಂಶದಲ್ಲಿ ನಮೂದಿಸಲಾಗಿರುವ ಎಲ್ಲಾ ವ್ಯಾಖ್ಯಾನಿತ ಮಾನದಂಡಗಳನ್ನು ಪೂರೈಸತಕ್ಕದ್ದು.

**1. ಸಂಯೋಜನಾ ನವೀಕರಣ / ತತ್ಕಾಲಿಕ ಸಂಯೋಜನಾ ಮುಂದುವರಿಕೆ(ಇ.ಟಿ.ಎ.):**

ಈಗಾಗಲೇ ಅಸ್ತಿತ್ವದಲ್ಲಿರುವ ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ವಿಷಯಗಳಲ್ಲಿ ನಡೆಸಲಾಗುತ್ತಿರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಬಿ.ಹೆಚ್.ಎಂ., ಎಂ.ಬಿ.ಎ, ಎಂ.ಸಿ.ಎ. ಕೋರ್ಸುಗಳ ಸಂಯೋಜನಾ ನವೀಕರಣ/ವಿದ್ಯಾರ್ಥಿಪ್ರಮಾಣದ ಹೆಚ್ಚಳಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಎ.ಐ.ಸಿ.ಟಿ.ಇ. ವತಿಯಿಂದ ಪೂರ್ವಾನುಮೋದನೆ, ಬಿ.ಎಸ್.ಎಲ್.ಪಿ/ಎಂ.ಎಸ್.ಎಲ್.ಪಿ, ಬಿ.ಎಸ್ಸಿ./ಎಂ.ಎಸ್ಸಿ(ಸ್ಪೀಚ್ ಅಂಡ್ ಹಿಯರಿಂಗ್) ನಡೆಸುತ್ತಿರುವ ಕಾಲೇಜುಗಳು ರೀಹೆಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಪೂರ್ವಾನುಮೋದನೆಯನ್ನು ಬಿ.ಎ./ಬಿ.ಎಸ್ಸಿ-ಬಿ.ಇಡಿ., ಬಿ.ಇಡಿ., ಬಿ.ಪಿ.ಇಡಿ. ಮತ್ತು ಎಂ.ಇಡಿ. ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳು ಎನ್.ಸಿ.ಟಿ.ಇ. ಇಂದ ಪೂರ್ವಾನುಮೋದನೆಯನ್ನು ಹೊಂದಿರತಕ್ಕದ್ದು.

**ನ್ಯಾಕ್ ಮೌಲ್ಯಾಂಕನ:** ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 76 ಯುಬಿವಿ 2011 ಬೆಂಗಳೂರು ದಿನಾಂಕ; 17-05-2011ರಲ್ಲಿ ಹಾಗೂ ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ಎಸಿಎ-3/ನ್ಯಾಕ್/2011-12 ದಿ:09-06-2011ರಲ್ಲಿ ತಿಳಿಸಿರುವಂತೆ, ಕಾಲೇಜು ಅಸ್ತಿತ್ವಕ್ಕೆ ಬಂದು ಐದು ವರ್ಷ ಪೂರೈಸಿರುವಂತಹ ಕಾಲೇಜುಗಳು ನ್ಯಾಕ್ ಸಂಸ್ಥೆಯ ಮಾನದಂಡವನ್ನು ಪೂರೈಸಿ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮೌಲ್ಯಾಂಕನವನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಈ ನಿಟ್ಟಿನಲ್ಲಿ ಕಾಲೇಜಿನ ಪ್ರಾಂಶುಪಾಲರುಗಳು ಕಾಲೇಜಿನ ಅಭಿವೃದ್ಧಿಗೆ ಸರ್ಕಾರವು ಹೊರಡಿಸುವ ನಿರ್ದೇಶನಗಳಿಗೆ ಬದ್ಧರಾಗಿರತಕ್ಕದ್ದು. 2022-23ನೇ ಸಾಲಿಗೆ ಅಂತಹ ಕಾಲೇಜುಗಳ ಸಂಯೋಜನಾ ನವೀಕರಣವು ಕಾಲೇಜು ನ್ಯಾಕ್ ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯ ಮೌಲ್ಯಾಂಕನವನ್ನು ಹೊಂದುವ ಷರತ್ತಿಗೊಳಪಟ್ಟಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ; 24-08-2020ರ ಅನ್ವಯ, NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿ ಅವಘಡ

ಸುರಕ್ಷತೆಯ ಬಗ್ಗೆ Fire Services Department ನಿಂದ Compliance certificate ಗಳನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.

ಸೂಚನೆ: ಕಾಲೇಜುಗಳು ಅಸ್ತಿತ್ವದಲ್ಲಿರುವ ಕೋರ್ಸುಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ರನುಸಾರ ಬದಲಾವಣೇ ಮಾಡಲಾದ ಕೋರ್ಸುಗಳಿಗೆ ಕೋರ್/ಡಿಸಿಪ್ಲೈನ್ ವಿದ್ಯಾರ್ಥಿ ಪ್ರಮಾಣವನ್ನು 2021-22ನೇ ಸಾಲಿನಲ್ಲಿ ನಿಗದಿಪಡಿಸಲಾದಂತೆ ನಮೂದಿಸತಕ್ಕದ್ದು.

**2. ವಿದ್ಯಾರ್ಥಿ ಪ್ರಮಾಣದ ಹೆಚ್ಚಳ(ಇ.ಟಿ.ಎ.-ಐ.ಐ.):**

ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸಿರುವ ಕಾಲೇಜುಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ವಿಷಯಗಳಲ್ಲಿ ನಡೆಸಲಾಗುತ್ತಿರುವ ಕಾಲೇಜುಗಳಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳ ಸಂಯೋಜನಾ ನವೀಕರಣಕ್ಕೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಬಿ.ಹೆಚ್.ಎಂ., ಎಂ.ಬಿ.ಎ, ಎಂ.ಸಿ.ಎ. ಕೋರ್ಸುಗಳ ಸಂಯೋಜನಾ ನವೀಕರಣ/ವಿದ್ಯಾರ್ಥಿಪ್ರಮಾಣದ ಹೆಚ್ಚಳಕ್ಕೆ ಅರ್ಜಿ ಸಲ್ಲಿಸುವ ಕಾಲೇಜುಗಳು ಎ.ಐ.ಸಿ.ಟಿ.ಇ. ವತಿಯಿಂದ ಪೂರ್ವಾನುಮೋದನೆ, ಬಿ.ಎಸ್.ಎಲ್.ಪಿ/ಎಂ.ಎಸ್.ಎಲ್.ಪಿ, ಬಿ.ಎಸ್ಸಿ./ಎಂ.ಎಸ್ಸಿ(ಸ್ಪೀಚ್ ಅಂಡ್ ಹಿಯರಿಂಗ್) ನಡೆಸುತ್ತಿರುವ ಕಾಲೇಜುಗಳು ರೀಹೆಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾದ ಪೂರ್ವಾನುಮೋದನೆಯನ್ನು ಬಿ.ಎ./ಬಿ.ಎಸ್ಸಿ-ಬಿ.ಇಡಿ., ಬಿ.ಇಡಿ., ಬಿ.ಪಿ.ಇಡಿ. ಮತ್ತು ಎಂ.ಇಡಿ. ಕೋರ್ಸುಗಳನ್ನು ನಡೆಸುತ್ತಿರುವ ಕಾಲೇಜುಗಳು ಎನ್.ಸಿ.ಟಿ.ಇ. ಇಂದ ಪೂರ್ವಾನುಮೋದನೆಯನ್ನು ಹೊಂದಿರತಕ್ಕದ್ದು.

ಸ್ನಾತಕೋತ್ತರ ಕೋರ್ಸುಗಳ ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಸಂಬಂಧಿಸಿದಂತೆ, ದಿನಾಂಕ: 1/3-06-2013ರ ವಿದ್ಯಾವಿಷಯಕ ಪರಿಷತ್ತು ಮತ್ತು ದಿನಾಂಕ: 04-06-2013ರಂದು ಜರುಗಿದ ಸಿಂಡಿಕೇಟ್ ಸಭೆಗಳು ನಿರ್ಣಯಿಸಿರುವಂತೆ, ಕಾಲೇಜುಗಳು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ನಿಗದಿಪಡಿಸಲಾಗಿರುವ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿ ವಿದ್ಯಾರ್ಥಿಪ್ರಮಾಣಕ್ಕೆ ಅರ್ಜಿ ಸಲ್ಲಿಸತಕ್ಕದ್ದಲ್ಲವೆಂಬ ಅಂಶವನ್ನು ಗಮನಿಸತಕ್ಕದ್ದು. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ನಿಗಧಿಪಡಿಸಲಾಗಿರುವ ವಿದ್ಯಾರ್ಥಿ ಪ್ರಮಾಣಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ಪರಿಚಯ ಕೈಪಿಡಿಯಲ್ಲಿ ಲಭ್ಯವಿರುತ್ತವೆ.

**3. ಹೆಚ್ಚುವರಿ ಕೋರ್ಸು/ಹೊಸ ಕೋರ್ಸು ಸಂಯೋಜನೆ**

ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸಿರುವ ಕಾಲೇಜುಗಳು ಕಲಾ, ವಿಜ್ಞಾನ, ವಾಣಿಜ್ಯ, ನಿರ್ವಹಣೆ ಮತ್ತು ಶಿಕ್ಷಣ ಕಾಲೇಜುಗಳು ಹೆಚ್ಚುವರಿ ಕೋರ್ಸುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಬಹುದಾಗಿದೆ. ಕಾಲೇಜುಗಳು ಅನುಮೋದಿತ ಕೋರ್ಸು/ವಿಷಯಗಳನ್ನು ಮಾತ್ರ ನಮೂದಿಸತಕ್ಕದ್ದು. ಅನುಮೋದಿತ ಕೋರ್ಸು/ವಿಷಯಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

**ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ:** 2 ವರ್ಷಗಳ ನಿರಂತರ ಸಂಯೋಜನೆಯನ್ನು ಪೂರೈಸಿ, ಉತ್ತಮ ಮೂಲಭೂತ ಸೌಕರ್ಯಗಳನ್ನು ಹಾಗೂ ಅರ್ಹ ಶಿಕ್ಷಕರನ್ನು ಹೊಂದಿರುವಂತಹ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ (ಎಂ.ಬಿ.ಎ ಕೋರ್ಸು ಹೊರತುಪಡಿಸಿ) ಹೊಸ ಸಂಯೋಜನೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರಿ ಕಾಲೇಜುಗಳು ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆಗೆ ಅರ್ಜಿ ಸಲ್ಲಿಸಲು ಕಾಲೇಜು ಶಿಕ್ಷಣ ಇಲಾಖೆಯ ಅನುಮತಿಯನ್ನು ಪಡೆಯತಕ್ಕದು.

**4. ಹೊಸ ಕಾಲೇಜು ಪ್ರಾರಂಭಿಸಲು ಸಂಯೋಜನೆ:**

ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಸಂಘ/ಟ್ರಸ್ಟ್ ನೊಂದಣಿ ಕಾಯಿದೆ ಅನ್ವಯ ನೊಂದಾಯಿತ ಆಡಳಿತ ಮಂಡಳಿ/ಸೊಸೈಟಿ/ಟ್ರಸ್ಟ್‌ಗಳು, ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಖಚಿತಪಡಿಸಿಕೊಂಡು ಹೊಸ ಕಾಲೇಜನ್ನು ಪ್ರಾರಂಭಿಸಲು (ಅನುಮೋದಿತ ಕೋರ್ಸು/ವಿಷಯ ಸಮೂಹಗಳಿಗೆ) ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ; 24-08-2020ರ ಅನ್ವಯ , NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿ ಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance certificate ಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಮುಂದುವರೆದು, ನೋಂದಾಯಿತ ಟ್ರಸ್ಟ್ ಡೀಡ್, ಕ್ರಯ ಪತ್ರ, ಪರಿಶಿಷ್ಠ/ಜಾತಿ ಪಂಗಡ ಪ್ರಮಾಣ ಪತ್ರ (ಸಮಾಜ ಕಲ್ಯಾಣ ಇಲಾಖೆಯಿಂದ), ವಿಧಾನ ಸಭಾ ಕ್ಷೇತ್ರದ ಪ್ರಮಾಣ ಪತ್ರ (ವಿಧಾನ ಸಭಾ ಕ್ಷೇತ್ರಗಳ ಗಡಿಯಲ್ಲಿರುವವರಿಗೆ) ಗಳನ್ನು ಆನ್-ಲೈನ್ ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು ಕಡ್ಡಾಯವಾಗಿದೆ. **ಈ ದಾಖಲೆಗಳು ಇಲ್ಲದೇ ಆನ್-ಲೈನ್ ಮೂಲಕ ಅರ್ಜಿಗಾಗಿ ರಿಕ್ವೆಸ್ಟ್ ಮತ್ತು ಶುಲ್ಕ ಸಂದಾಯ ಮಾಡಿದಲ್ಲಿ ಅಂತಹ ಅರ್ಜಿ/ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲ.**

*ಸೂಚನೆ: 1. ಎನ್.ಸಿ.ಟಿ.ಇ. ಸೂಚನೆಯಂತೆ ಆಡಳಿತ ಮಂಡಳಿ/ಸೊಸೈಟಿ/ಟ್ರಸ್ಟ್‌ಗಳು ಹೊಸ ಬಿ.ಇಡಿ/ಬಿ.ಪಿ.ಇಡಿ. ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸತಕ್ಕದ್ದಲ್ಲ.*

*2. ಈಗಾಗಲೇ ಅಸ್ತಿತ್ವದಲ್ಲಿರುವ ಕಾಲೇಜುಗಳು ಮಾತ್ರ ಸರ್ಟಿಫಿಕೇಟ್ ಕೋರ್ಸು, ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ ಕೋರ್ಸುಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.*

**6. ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನಾ ನವೀಕರಣ (ಸ್ನಾತಕೋತ್ತರ ಕೋರ್ಸುಗಳನ್ನು ಹೊರತುಪಡಿಸಿದೆ):**

ಅಸ್ತಿತ್ವದಲ್ಲಿರುವ ಕಾಲೇಜುಗಳು ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡಗಳನ್ನು ಪೂರೈಸತಕ್ಕದ್ದು.

**ಶಾಶ್ವತ ಸಂಯೋಜನೆ (ಎಫ್.ಪಿ.ಎ):** ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 62ರ ಅಡಿಯಲ್ಲಿ, ವಿಶ್ವವಿದ್ಯಾಲಯಕ್ಕೆ 5ವರ್ಷಕ್ಕೂ ಕಡಿಮೆ ಇಲ್ಲದ ಅವಧಿಗೆ ನಿರಂತರ ಸಂಯೋಜನಾ ನವೀಕರಣ ಹೊಂದಿದ್ದು, ಸರಾಸರಿಯಲ್ಲಿ ವಿಶ್ವವಿದ್ಯಾಲಯವು ನಿಗಧಿಪಡಿಸಿರುವಂತಹ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜುಗಳು ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 37 ಯುಬಿವಿ 2007 ದಿನಾಂಕ; 09-04-2007ರಲ್ಲಿ ನಿಗದಿಪಡಿಸಿರುವಂತೆ ಕಾಲೇಜುಗಳು **ನ್ಯಾಕ್** ಸಂಸ್ಥೆಯಿಂದ ಕನಿಷ್ಠ 'ಸಿ' ದರ್ಜೆಯನ್ನು ಹೊಂದಿರುವುದು ಅತ್ಯಾವಶ್ಯಕವಾಗಿರುತ್ತದೆ.

**ಶಾಶ್ವತ ಸಂಯೋಜನೆ ನವೀಕರಣ:(ಆರ್.ಪಿ.ಎ.):** ಶಾಶ್ವತ ಸಂಯೋಜನೆಯ ಅವಧಿಯು ಪೂರ್ಣಗೊಂಡಿರುವಂತಹ ಕಾಲೇಜುಗಳು ಶಾಶ್ವತ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 227 ಯುಆರ್‌ಸಿ 2017 ದಿನಾಂಕ: 07-07-2017ರಲ್ಲಿ, ನ್ಯಾಕ್ ಸಂಸ್ಥೆಯಿಂದ ಎ, ಬಿ, ಸಿ ದರ್ಜೆಗಳನ್ನು ಪಡೆದಿರುವಂತಹ ಕಾಲೇಜುಗಳಿಗೆ ಅನುಕ್ರಮವಾಗಿ 5 ವರ್ಷ, 4 ವರ್ಷ ಮತ್ತು 3 ವರ್ಷಗಳ ಅವಧಿಯನ್ನು ಶಾಶ್ವತ ಸಂಯೋಜನೆಗೆ ನಿಗದಿಪಡಿಸಲಾಗಿದೆ.

**ಶಾಶ್ವತ ಸಂಯೋಜನೆ ವಿಸ್ತರಣೆ (ಇ.ಪಿ.ಎ):** ಈಗಾಗಲೇ ಶಾಶ್ವತ ಸಂಯೋಜನೆಯನ್ನು ಪಡೆದಿರುವಂತಹ ಕಾಲೇಜುಗಳು ಆನ್-ಲೈನ್ ಅರ್ಜಿಯಲ್ಲಿ ಎಕ್ಸ್‌ಟೆನ್ಷನ್ ಆಫ್ ಪರ್ಮನೆಂಟ್ ಅಫಿಲೇಯೇಷನ್ ಅಡಿ ಕೋರ್ಸುಗಳನ್ನು ನಮೂದಿಸಿ, ನಿಗದಿತ ವಾರ್ಷಿಕ ಶುಲ್ಕದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

**7. ಸ್ಥಳಾಂತರ/ಹೆಸರು ಬದಲಾವಣೆ/ಆಡಳಿತದ ಬದಲಾವಣೆ ಇತ್ಯಾದಿ:**

ಕಾಲೇಜುಗಳ ಸ್ಥಳಾಂತರ/ಹೆಸರು ಬದಲಾವಣೆ/ಆಡಳಿತದ ಬದಲಾವಣೆ ಇತ್ಯಾದಿಗಳನ್ನು ಕೆ.ಎಸ್.ಯು. ಅಧಿನಿಯಮ 2000ದ ಪ್ರಕರಣ 59(5)ರ ಅಡಿಯಲ್ಲಿ ಪರಿಷ್ಕರಿಸಲಾಗುವುದು. ಅಂತಹ ಕಾಲೇಜುಗಳು ಅ) ಆಡಳಿತ ಮಂಡಳಿಯ/ಟ್ರಸ್ಟ್‌ನ ನಿರ್ಣಯ, ಆ) ಕಟ್ಟಡದ ನಕ್ಷೆ, ಕ್ರಯ/ಬೋಗ್ಯದ ಪತ್ರ, ಇ) ಇತರೇ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಇತ್ಯಾದಿ ಅವಶ್ಯಕ ದಾಖಲೆಗಳೊಂದಿಗೆ ನಿಗದಿತ ಶುಲ್ಕ ಪಾವತಿಸಿ ಸಲ್ಲಿಸತಕ್ಕದ್ದು.

ಕಾಲೇಜು ಸ್ಥಳಾಂತರ ಕೋರಿ ಅರ್ಜಿ ಸಲ್ಲಿಸುವ ಕಾಲೇಜುಗಳು ಅಧಿಸೂಚನೆಯ ಕಂಡಿಕೆ 1ರಲ್ಲಿ ನಮೂದಿಸಿರುವ ಮಾನದಂಡವನ್ನು ಪೂರೈಸತಕ್ಕದ್ದು ಮತ್ತು NBC (National Building Code) ನಿಯಮಾವಳಿಯನ್ವಯ ಕಟ್ಟಡದ ಸುರಕ್ಷತೆಯ ಕುರಿತು ಲೋಕೋಪಯೋಗಿ ಇಲಾಖೆಯಿಂದ ಮತ್ತು ಅಗ್ನಿ ಅವಘಡ ಸುರಕ್ಷತೆಯ ಬಗ್ಗೆ Fire Services Department ನಿಂದ Compliance certificate ಗಳನ್ನು ಪಡೆದು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ

***ಸೂಚನೆ:*** *ಕಾಲೇಜು/ಆಡಳಿತಮಂಡಳಿಗಳು ಸ್ಥಳಾಂತರ/ಹೆಸರು ಬದಲಾವಣೆ/ಆಡಳಿತದ ಬದಲಾವಣೆ ಇತ್ಯಾದಿಗಳ ಬಗ್ಗೆ ಸರ್ಕಾರದಿಂದ ಅನುಮೋದನೆ ದೊರತ ನಂತರ ಮಾತ್ರ ಸಾಧ್ಯವಾಗುವುದು.*

**8. ಕೋರ್ಸುಗಳ ಹಾಗೂ ಕಾಲೇಜುಗಳ ಸಂಯೋಜನಾ ರದ್ದತಿ:-**

ಕಾಲೇಜುಗಳು ಕೋರ್ಸುಗ/ಳ ತಾತ್ಕಾಲಿಕ ಸಂಯೋಜನೆಯನ್ನು ಮುಂದುವರಿಸುವುದು ಅಗತ್ಯವಲ್ಲವೆಂದು ಇಚ್ಚಿಸಿದಲ್ಲಿ, ಅಂತಹ ಕಾಲೇಜುಗಳನ್ನು ಕ್ಲೋಸರ್ ಆಫ್ ಕೋರ್ಸು ಅಡಿ ಆನ್-ಲೈನ್ ಅರ್ಜಿಯಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ.

**9. ಸಂಯೋಜನಾ /ಅರ್ಜಿಗಳ ಶುಲ್ಕ ಮತ್ತು ಅರ್ಜಿಗಳನ್ನು ಸಲ್ಲಿಸುವಿಕೆ:**

ವಿಶ್ವವಿದ್ಯಾಲಯದ ಅಧಿಸೂಚೂಚನೆ ಸಂಖ್ಯೆ; Aca-III:A3:Affln.Fee Structure:2022-23 dated: 23-05-2022 ರಲ್ಲಿ ಸಂಯೋಜನಾ ಶುಲ್ಕಗಳನ್ನು ಪ್ರಕಟಿಸಲಾಗಿದ್ದು (**ಸರ್ಕಾರದ ಆದೇಶ ಸಂಖ್ಯೆ ಇಡಿ 21 ಯುಬಿವಿ 2004 ಬೆಂಗಳೂರು ದಿನಾಂಕ; 15-05-2004ರಂತೆ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ಆಡಳಿತ ಮಂಡಳಿಗೆ ಸಂಯೋಜನಾ ಶುಲ್ಕಗಳಲ್ಲಿ ಶೇ50ರಷ್ಟು ರಿಯಾಯಿತಿ ಇರುತ್ತದೆ**) ಈ ಶುಲ್ಕಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುವ http://bangaloreuniversity.ac.in/ ಆನ್-ಲೈನ್ ಪೋರ್ಟಲ್ ಮೂಲಕ ಪಾವತಿಸಕ್ಕದ್ದು. ಶುಲ್ಕ ಪಾವತಿಯ ಆನ್-ಲೈನ್ ಪೋರ್ಟಲ್ ದಿನಾಂಕ: 27-03-2022ರಿಂದ ಬಿಡುಗಡೆ ಮಾಡಲಾಗುವುದು, ಕಾಲೇಜುಗಳು ಶುಲ್ಕವನ್ನು ಆನ್-ಲೈನ್ ಟ್ರಾನ್ಸ್ಫರ್, ನೆಟ್ ಬ್ಯಾಂಕಿಂಗ್/ಡಿಬಿಟ್/ಕ್ರೆಡಿಟ್ ಕಾರ್ಡ್ ಮೂಲಕ ಮಾತ್ರ ಪಾವತಿಸಬಹುದಾಗಿದೆ. ಯಾವುದೇ ಕಾರಣಕ್ಕೂ ಡಿ.ಡಿ. ಮೂಲಕ ಶುಲ್ಕಗಳನ್ನು ಸ್ವೀಕರಿಸಲಾಗುವುದಿಲ್ಲ. ಕಾಲೇಜುಗಳು ಸಂಯೋಜನಾ /ಅರ್ಜಿ ಶುಲ್ಕ ಪಾವತಿಯ ಬದಲಾವಣೆಯನ್ನು ಗಮನಿದಲ್ಲಿರಿಸಿಕೊಳ್ಳತಕ್ಕದ್ದು. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ

ಆಡಳಿತ ಒಳಪಟ್ಟ ಕಾಲೇಜುಗಳು ಸಂಯೋಜನಾ ಶುಲ್ಕ ವಿನಾಯಿತಿಗೆ, ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪಡೆಯಲಾದ ಪ್ರಮಾಣ ಪತ್ರವನ್ನು ತಪ್ಪದೇ ಸಲ್ಲಿಸತಕ್ಕದ್ದು.

ಅರ್ಜಿ ಶುಲ್ಕ: ರೂ.2,000/-

ವಿದ್ಯಾರ್ಥಿ ಪ್ರಮಾಣದ ಹೆಚ್ಚಳ/ಹೊಸ ಕೋರ್ಸು ಸಂಯೋಜನೆ/ಶಾಶ್ವತ ಸಂಯೋಜನೆಗೆ / ಶಾಶ್ವತ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸುವಂತಹ ಕಾಲೇಜುಗಳು ಸಂಯೋಜನಾ ಶುಲ್ಕ ಪಾವತಿಗೂ ಮುಂದೆ ಕರಡು ಅರ್ಜಿಗಳನ್ನು ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ) ***'ಕುಲಸಚಿವರ ಕಛೇರಿ, ವಿದ್ಯಾಕಾರ್ಯಶಾಖೆ-3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560 056'*** ಇಲ್ಲಿಗೆ ಪರಿಶೀಲನೆಗೆ ಸಲ್ಲಿಸತಕ್ಕದ್ದು ಹಾಗೂ ಔಪಚಾರಿಕ ಪರಿಶೀಲನೆಯ ನಂತರವಷ್ಟೆ ಶುಲ್ಕ ಪಾವತಿಗೆ ಅವಕಾಶ ನೀಡಲಾಗುವುದು.

ಎಲ್ಲಾ ತೆರನಾಗಿ ಆನ್-ಲೈನ್ ಮೂಲಕ ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಗಳನ್ನು, ಹಾಗೂ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಲಾದ ಎಲ್ಲಾ ದಾಖಲೆಗಳ **ಆರು** ಪ್ರತಿಗಳು ಹಾಗೂ ಅರ್ಜಿ ಶುಲ್ಕದ ರಸೀದಿಯೊಂದಿಗೆ ದಿನಾಂಕ: **10-06-2022** ( ಸಂಜೆ 4.00 ಗಂಟೆಯೊಳಗೆ) ಮತ್ತು ರೂ.1,000/-ಗಳ ದಂಡ ಶುಲ್ಕದೊಂದಿಗೆ ದಿನಾಂಕ: **15-06-2022** (ಸಂಜೆ 4.00 ಗಂಟೆಯೊಳಗೆ) ***'ಕುಲಸಚಿವರ ಕಛೇರಿ, ವಿದ್ಯಾಕಾರ್ಯಶಾಖೆ-3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560 056'*** ಇಲ್ಲಿಗೆ ಖುದ್ದಾಗಿ ತಪ್ಪದೇ ಸಲಿಸತಕ್ಕದ್ದು.

*ಸೂಚನೆ: (1) ಸಂಯೋಜನಾ ಶುಲ್ಕದ ಮರುಪಾವತಿಯು ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ/ಸಂಸ್ಥೆಗಳ ಪರಿಷ್ಕೃತ ಪರಿನಿಯಮಾವಳಿಗಳ ಪ್ರಕಾರ ಮಾಡಲಾಗುವುದು.*

*(2) ಅನರ್ಹ ಕೋರ್ಸುಗಳಿಗೆ ಅರ್ಜಿ ಸಲ್ಲಿಸದಲ್ಲಿ ಕೋರ್ಸುಗಳ ಶುಲ್ಕವನ್ನು ಮರುಪಾವತಿ/ಹೊಂದಾವಣೆ ಮಾಡಿಕೊಳ್ಳಲಾಗುವುದಿಲ್ಲ.*

*(3) ಹೆಚ್ಚುವರಿ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-22961039 ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.*

***ಆದೇಶದ ಮೇರೆಗೆ,***

(ಸಹಿ)

***ಕುಲಸಚಿವರು***

**ಪ್ರತಿಗಳು:**

1) ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು-560 001.
3) ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಪಿ.ಕೆ. ಬ್ಲಾಕ್, ಬೆಂಗಳೂರು-560 001
4) ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕಾ, ಕೋಲಾರ -563 103.
5) ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾಲಯ ಬೆಂಗಳೂರು-560 001.
6) ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
7) ಆಯುಕ್ತರು/ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-560 001.
8) ವಿತ್ತಾಧಿಕಾರಿಯವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
9) ನಿರ್ದೇಶಕರು, ಪ್ರಸಾರಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056.
10) ಕುಲಪತಿಯವರು/ಕುಲಸಚಿವರು/ಕುಲಸಚಿವರು(ಮೌ)/ವಿತ್ತಾಧಿಕಾರಿಯವರು ಇವರುಗಳ ಆಪ್ತ ಕಾರ್ಯದರ್ಶಿ/ಸಹಾಯಕರುಗಳಿಗೆ, ಬೆಂ.ವಿ.ವಿ. ಬೆಂಗಳೂರು.
11) ಉಪಕುಲಸಚಿವರು/ಅಧೀಕ್ಷಕರು, ವಿದ್ಯಾಕಾರ್ಯಶಾಖೆ-1,2,4, ಬೆಂ.ವಿ.ವಿ, ಬೆಂಗಳೂರು.
12) ಸಿಸ್ಟಮ್ ಅನಲಿಸ್ಟ್, ಈ ಗವರ್ನನ್ಸ್ ಸೆಲ್-ಮೇಲ್ಕಾಣಿಸಿದ ಅಧಿಸೂಚನಯನ್ನು ವಿ.ವಿ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
13) ಪ್ರೋಗ್ರಾಮರ್ ಅವರು, ಗಣಕಯಂತ್ರ ವಿಭಾಗ, ಹಣಕಾಸು ವಿಭಾಗ, ಬೆಂ.ವಿ.ವಿ.-ಆನ್-ಲೈನ್ ಪೇಮೆಂಟ್ ವ್ಯವಸ್ಥೆ ಮಾಡಲು.
14) ಅಧೀಕ್ಷಕರು, ಸಂಪತ್ತಿ ವಿಭಾಗ/ರವಾನೆ ಮತ್ತು ಸ್ವೀಕೃತಿ ವಿಭಾಗ, ಬೆಂ.ವಿ.ವಿ, ಬೆಂಗಳೂರು.